**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.**

ಓ.ಎಸ್.64/2013

ಸಾಕ್ಷಿಯನ್ನು ದಿಃ **24.01.2026** ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ವಾದಿಯರ ಪರಃಶ್ರೀ**.CMG **ವಕೀಲರಿಂದ**:

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆಯನ್ನು ಯಾರು ಯಾರಿಗೆ ಕಳುಹಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆ ದಿಃ 20.02.2003ರಂದು ನನ್ನ ಮಗನಿಗೆ ವಾದಿಯ ಗಂಡ ಕಳುಹಿಸಿದ ಮೇಲ್ ಸಂದೇಶ ಎಂದರೆ ಸರಿಯಲ್ಲ. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಿ ಅದು ದಿಃ 10.12.2004 ರಂದು ನನ್ನ ಗಂಡನಾದ 1ನೇ ಪ್ರತಿವಾದಿ ಹಣ ಸ್ವೀಕರಿಸಿದ ಬಗ್ಗೆ ವಾದಿಯ ಗಂಡನಿಗೆ ಕಳುಹಿಸಿದ ಇ-ಮೇಲ್ ಸಂದೇಶ ಎಂದರೆ ಸರಿಯಲ್ಲ. ಈಗ ತೋರಿಸುತ್ತಿರುವ ದಾಖಲೆ ದಿಃ 11.07.2002 ರಂದು ವಾದಿಯ ಗಂಡ ನನ್ನ ಮಗನಿಗೆ ಇ-ಮೇಲ್ ಸಂದೇಶ ಕಳುಹಿಸಿ 1ನೇ ಪ್ರತಿವಾದಿಯ ಬ್ಯಾಂಕ್ ಖಾತೆಗೆ ರೂ.10 ಸಾವಿರ ಡಾಲರ್ ಕಳುಹಿಸಲಾಗಿದೆ ಎಂದು ಬರೆದಿದ್ದಾರೆ ಎಂದರೆ ಸರಿಯಲ್ಲ. ಸದರಿ ಇ-ಮೇಲ್ ಸಂದೇಶಕ್ಕೆ ನನ್ನ ಮಗ ವಾದಿಯ ಗಂಡನಿಗೆ ಮರುಸಂದೇಶ ಕಳುಹಿಸಿದ್ದಾರೆ ಎಂದರೆ ಸರಿಯಲ್ಲ. ಈಗ ತೋರಿಸುತ್ತಿರುವ ದಾಖಲೆ ನಾನು ಸ್ವತಃ ನನ್ನ ಕೈಬರವಣಿಯಲ್ಲಿ ಬರೆದ ಪತ್ರ ಎಂದರೆ ಸರಿಯಲ್ಲ. ಸದರಿ ದಾಖಲೆಯಲ್ಲಿರುವ ಬರವಣಿಗೆ ನನ್ನದೇ ಅಲ್ಲವೇ ಎಂದು ರುಜುವಾತುಪಡಿಸುವ ಬಗ್ಗೆ ಬೆರಳಚ್ಚು ತಜ್ಞರಿಗೆ ಕಳುಹಿಸಲು ನನ್ನ ತಕರಾರು ಇಲ್ಲ. ಸಾಕ್ಷಿಗೆ ಒಂದು ಅಂಚೆ ಲಕೋಟೆಯನ್ನು ತೋರಿಸಿ ಅದರಲ್ಲಿ ಬರೆದ ವಿಳಾಸದಲ್ಲಿರುವ ಕೈ ಬರವಣಿಗೆ ತನ್ನದಲ್ಲ ಎಂದು ನುಡಿಯುತ್ತಾರೆ. ಮೇಲೆ ಹೇಳಿದ ಪತ್ರದಲ್ಲಿರುವ ಕೈ ಬರಹ ನನ್ನದು ಎಂದು ದಿನಾಂಕಃ 03.01.2026 ರಂದು ಸಾಕ್ಷಿ ನುಡಿಯುವಾಗ ನಾನು ಒಪ್ಪಿಕೊಂಡಿದ್ದರೂ ಸಹ ಈಗ 1ನೇ ಪ್ರತಿವಾದಿಯ ಮಾತು ಕೇಳಿ ನನ್ನ ಬರವಣಿಗೆ ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನಗೆ confuse ಆಗಿತ್ತು ಎಂದು ನುಡಿಯುತ್ತಾರೆ. ನಾನು ದಿಃ 03.01.2026 ರಂದು ಮೊದಲ ಬಾರಿಗೆ ಈ ನ್ಯಾಯಾಲಯದ ಮುಂದೆ ಹಾಜರಾಗಿದ್ದೇನೆ ಎಂದರೆ ಸರಿ. ದಿಃ 03.01.2026ಕ್ಕೂ ಮೊದಲು ನನ್ನ ಪರವಾಗಿ ಯಾವ ವಕೀಲರು ಪ್ರತಿವಾದ ಪತ್ರ

ಸಲ್ಲಿಸಿದ್ದಾರೆ ಮತ್ತು ಯಾವೆಲ್ಲಾ ದಾಖಲೆಗಳನ್ನು ಹಾಜರುಪಡಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಏನೆಲ್ಲಾ ದಾಖಲೆಗಳನ್ನು ಕೊಟ್ಟು ನಿಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದಿರಿ ಎಂದರೆ ದಾಖಲೆಗಳ ಬಗ್ಗೆ ಈಗ ವಿವರಿಸಲಾಗುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಯಾರು ತಯಾರಿಸಿದ್ದಾರೆ ಎಂದರೆ 1ನೇ ಪ್ರತಿವಾದಿಗೆ ಗೊತ್ತಿದೆ.

ನನಗೆ ಮದುವೆಯಾಗುವ ಪೂರ್ವದಲ್ಲಿಯೇ ಮಂಡ್ಯ ಪಟ್ಟಣದ ಅಶೋಕ ನಗರ extension ನಲ್ಲಿರುವ ಸೈಟ್ ಸಂಃ 140/1159 ಇತ್ತು ಎಂದರೆ ಸರಿ. ನನಗೆ ಮದುವೆಯಾಗುವ ಪೂರ್ವದಲ್ಲಿ ಯಾವುದೇ ಕಟ್ಟಡ ಇಲ್ಲದೇ ಖಾಲಿ ಸೈಟ್ ಆಗಿತ್ತು ಎಂದರೆ ಸರಿ. ಅದನ್ನು ನನ್ನ ಮಾವ ಪೇಟಯ್ಯರವರು ಸಂಪಾದಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ಸೈಟಿನ ಪೂರ್ವ-ಪಶ್ಚಿಮ 128 ಅಡಿ ಇರಬಹುದು, ಉತ್ತರ-ದಕ್ಷಿಣ ಎಷ್ಟು ವಿಸ್ತೀರ್ಣ ಎಂದು ಗೊತ್ತಿಲ್ಲ. ಸದರಿ ಸೈಟ್ ನಲ್ಲಿ ಈಗ ಒಂದು ಆಸ್ಪತ್ರೆ ಮತ್ತು ನಾವು ವಾಸ ಮಾಡುತ್ತಿರುವ ದೊಡ್ಡಬಂಗಲೆ ಇದೆ ಎಂದರೆ ಸರಿ. ಸದರಿ ಮನೆಯನ್ನು ಬಂದು ಹೋಗುವಾಗ ಒಟ್ಟು ಕುಟುಂಬದ ಎಲ್ಲರಿಗೆ ವಾಸಕ್ಕೆ ಅನುಕೂಲವಾಗಬೇಕೆಂದು ವಾದಿಯ ಗಂಡ ಕಳುಹಿಸಿದ ಹಣದಿಂದ ಕಟ್ಟಲಾಗಿದೆ ಎಂದರೆ ಸರಿಯಲ್ಲ. 2ನೇ ವಾದಿ ಅವಿವಾಹಿತೆಯಾಗಿರುವ ಕಾರಣ ಕುಟುಂಬದ ಜೊತೆಯೇ ಇರಬೇಕು ಎಂದು ಅವರಿಗೆ ಅನುಕೂಲವಾಗುವ ರೀತಿಯಲ್ಲಿ ವಾದಿಯ ಗಂಡ ಮೇಲೆ ಹೇಳಿದ ಆಸ್ಪತ್ರೆಯನ್ನು ಕಟ್ಟಿಸಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆಸ್ಪತ್ರೆಯ ಹೆಸರು ಕಸ್ತೂರಿ ಬಾ ನರ್ಸಿಂಗ್ ಹೋಮ್. ಸದರಿ ನರ್ಸಿಂಗ್ ಹೋಮ್ ಅನ್ನು ನನಗೆ ಮದುವೆಯಾಗುವ ಪೂರ್ವದಿಂದಲೂ 2ನೇ ಪ್ರತಿವಾದಿ ನಡೆಸುತ್ತಿದ್ದರು. 2ನೇ ಪ್ರತಿವಾದಿ ಅವಿವಾಹಿತೆಯಾಗಿ ಸಂತಾನವಿಲ್ಲದೇ ತೀರಿಹೋಗಿದ್ದಾರೆ. ಈಗ ತೋರಿಸುತ್ತಿರುವ ಬಾವಚಿತ್ರದಲ್ಲಿರುವುದೇ ನಾನು ಹೇಳಿದ ನರ್ಸಿಂಗ್ ಹೋಮ್ ಎಂದರೆ ಸರಿ. ಅದನ್ನು ನಿಪಿ-22 ಎಂದರೆ ಗೊತ್ತಿಲ್ಲ. ಪೇಟಯ್ಯ ಬಿನ್ ಚಿಕ್ಕ ಪುಟ್ಟೇಗೌಡ ಎಂದರೆ ನನ್ನ ಮಾವ ಹಾಗೂ ಅವರ ತಂದೆ. ಮೊದಲಿಗೆ ಮೇಲೆ ಹೇಳಿದ ಆಸ್ಪತ್ರೆ ಮತ್ತು ನಾವು ವಾಸ ಮಾಡುತ್ತಿರುವ ಮನೆಯ ಜಾಗ ನನ್ನ ಮಾವ ಪೇಟಯ್ಯರವರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ಡಾ.ಪಿ ಶಕುಂತಲ ಬಿನ್ ಪೇಟಯ್ಯ ಎಂದರೆ 2ನೇ ಪ್ರತಿವಾದಿ. ಮೇಲೆ ಹೇಳಿದ ಆಸ್ಪತ್ರೆ ಮತ್ತು ಮನೆ ಇರುವ ಜಾಗದ ಅರ್ಧಭಾಗ ನನ್ನ ಮಾವ ಪೇಟಯ್ಯರವರ ಮರಣಾನಂತರ 2ನೇ ಪ್ರತಿವಾದಿಯ ಹೆಸರಿಗೆ ಆಯಿತು ಎಂದರೆ ಸರಿ. ಉಳಿದ ಅರ್ಧಭಾಗ ಎಂದರೆ ನಾವು ವಾಸವಿರುವ ಬಂಗಲೆಯ

ಜಾಗ 1ನೇ ಪ್ರತಿವಾದಿಯ ಹೆಸರಿಗೆ ದಾಖಲಾಯಿತು ಎಂದರೆ ಇರಬಹುದು ಗೊತ್ತಿಲ್ಲ. ವಾದಿ ಭಾಗ ಕೇಳಲು ಬಂದಾಗ ಅವರಿಗೆ ಮೋಸ ಮಾಡಬೇಕೆಂದು ನನ್ನ ಗಂಡನ ಹೆಸರಿನಲ್ಲಿರುವ ಆಸ್ತಿಯನ್ನು ಮನ್ವಂತ್ ರವರ ಹೆಸರಿಗೆ ಬದಲಾಯಿಸಿದ್ದೇವೆ ಎಂದರೆ ಸರಿಯಲ್ಲ. ಸದರಿ ಆಸ್ಪತ್ರೆ ಮತ್ತು ಬಂಗಲೆ ಇರುವ ಜಾಗ ಈಗ ಯಾರ ಹೆಸರಿನಲ್ಲಿದೆ ಎಂದು ನಿಮ್ಮ ಪ್ರತಿವಾದ ಪತ್ರ ಮತ್ತು ವಿಚಾರಣೆಯ ಸಮಯದಲ್ಲಿ ತಿಳಿಸಿದ್ದಿರಾ ಎಂದರೆ ಗೊತ್ತಿಲ್ಲ.

ಸಾಕ್ಷಿಗೆ ಆಸ್ತಿ ತೆರಿಗೆ ಬೇಡಿಕೆ ಸಂಗ್ರಹಣೆಯ ಒಂದು ನಕಲು ಪ್ರತಿಯನ್ನು ತೋರಿಸಲಾಗಿ ಅದರಲ್ಲಿರುವ ಹೆಸರುಗಳು ತನ್ನ ಮಾವ, ಗಂಡ ಮತ್ತು 2ನೇ ಪ್ರತಿವಾದಿಯದ್ದು ಎಂದು ಸಾಕ್ಷಿ ಒಪ್ಪಿಕೊಳ್ಳುತ್ತಾರೆ. ***(ಈ ಹಂತದಲ್ಲಿ ಸದರಿ ದಾಖಲೆಯನ್ನು ನಿಶಾನೆಯಾಗಿ ಗುರುತಿಸಿಕೊಳ್ಳಲು ವಾದಿ ಪರ ವಕೀಲರು ಕೇಳಿಕೊಂಡಿದ್ದು, ಸದರಿ ದಾಖಲೆ ನಕಲು ಪ್ರತಿಯಾಗಿರುವ ಕಾರಣ ನಿಶಾನೆಯಾಗಿ ಗುರುತಿಸಿಕೊಳ್ಳಲು ಅವಕಾಶ ಇಲ್ಲದೇ ಇರುವುದರಿಂದ ವಾದಿ ಪರ ವಕೀಲರು ಮಾಡಿದ ಕೋರಿಕೆಯನ್ನು ತಳ್ಳಿಹಾಕಲಾಯಿತು.) (ಈ ಹಂತದಲ್ಲಿ ಸದರಿ ದಾಖಲೆಯನ್ನು ನಿಶಾನೆಯಾಗಿ ಗುರುತಿಸಿಕೊಳ್ಳುವ ಬಗ್ಗೆ ವಾದಿ ಪರ ವಕೀಲರು ಸೂಕ್ತ ವಾದವನ್ನು ಮಂಡಿಸುವುದಾಗಿ ಹೇಳಿರುವುದರಿಂದ ಸದರಿ ದಾಖಲೆಯನ್ನು ನ್ಯಾಯಾಲಯದ ಕಡತಕ್ಕೆ ತೆಗೆದುಕೊಳ್ಳಲಾಯಿತು. ಹಾಗೂ ಈ ಬಗ್ಗೆ ವಾದವನ್ನು ಮಂಡಿಸಲು ವಾದಿ ಪರ ವಕೀಲರಿಗೆ ಅನುಮತಿಯನ್ನು ತೆರೆದಿಡಲಾಗಿದೆ).***

ಮೇಲೆ ಹೇಳಿದ ಆಸ್ಪತೆರ ಮತ್ತು ಬಂಗಲೆ ಇರುವ ಜಾಗ ನನ್ನ ಮಾವ ಪೇಟಯ್ಯ ರವರಿಂದ ನನ್ನ ಗಂಡ, ನನ್ನ ಮಗ ಮತ್ತು 2ನೇ ಪ್ರತಿವಾದಿಗೆ ಯಾವ ರೀತಿ ಬಂತು ಎಂದು ನನಗೆ ಗೊತ್ತಿಲ್ಲ. ನನ್ನ ಮಗನನ್ನು ಈ ದಾವೆಯಲ್ಲಿ ಸಾಕ್ಷಿ ಮಾಡಿಸುತ್ತೇನೆ. ಮೇಲೆ ಹೇಳಿದ ನರ್ಸಿಂಗ್ ಹೋಮ್ ನಿಂದ ಪ್ರತೀ ತಿಂಗಳು 5 ರಿಂದ 10 ಲಕ್ಷ ಆದಾಯ ಬರುತ್ತದೆ ಎಂದರೆ ಸರಿಯಲ್ಲ. ಸದರಿ ನರ್ಸಿಂಗ್ ಹೋಮ್ ನಲ್ಲಿರುವ ಎಲ್ಲಾ ಯಂತ್ರೋಪಕರಣಗಳನ್ನು ವಾದಿಯ ಗಂಡ ಅಮೇರಿಕಾದಿಂದ ಕಳುಹಿಸಿದ್ದಾರೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ಮೃತಪಟ್ಟು ಸುಮಾರು 5-6 ವರ್ಷಗಳಾಯಿತು. 2ನೇ ಪ್ರತಿವಾದಿ ನನಗಾಗಲೀ, ನನ್ನ ಗಂಡನಿಗಾಗಲೀ, ನನ್ನ ಮಗನಿಗಾಗಲೀ ಯಾವುದೇ ಮೃತ್ಯು ಪತ್ರ ಅಥವಾ ದಾನಪತ್ರ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ 1ನೇ ಪ್ರತಿವಾದಿಯನ್ನು ಕೇಳಬೇಕು. ಮೇಲೆ ಹೇಳಿದ ಬಂಗಲೆ ಮತ್ತು ಆಸ್ಪತ್ರೆ ನಿರ್ಮಿಸಲು ಯಾವುದೇ ಸಾಲ ಮಾಡಿಲ್ಲ ಎಂದರೆ 1ನೇ ಪ್ರತಿವಾದಿಗೆ ಗೊತ್ತಿದೆ. ಸದರಿ ಸ್ವತ್ತಿನಲ್ಲಿ ನನ್ನ ಗಂಡನನ್ನು ಸೇರಿಸಿ ನನ್ನ ಮಾವನಾದ ಪೇಟಯ್ಯರವರ ಎಲ್ಲಾ ಮಕ್ಕಳಿಗೂ ಹಕ್ಕು ಇದೆ ಎಂದರೆ ಸರಿಯಲ್ಲ.

ನನ್ನ ತಂದೆ ವ್ಯಾಪಾರ ಮಾಡುತ್ತಿದ್ದರು. 1ನೇ ಪ್ರತಿವಾದಿಯ ಸೋದರ ಮಾವ M.P ಆಗಿದ್ದರು. ನಮ್ಮ ಕುಟುಂಬದವರು ನೆಂಟರಿಷ್ಟರೆಲ್ಲಾ ಸೇರಿ ವಾದಿಗೆ ಮತ್ತು ಅವರ ಮಗಳಿಗೆ ದಾವಾ ಆಸ್ತಿಗಳಲ್ಲಿ ಭಾಗ ಕೊಡಬೇಕು ಎಂದು ಪಂಚಾಯ್ತಿ ಮಾಡಿದ್ದು, ಆಗ ನಾನು ಮತ್ತು 1ನೇಪ್ರತಿವಾದಿ ಅದಕ್ಕೆ ಒಪ್ಪಿಕೊಂಡಿದ್ದೇವು ಎಂದರೆ ಸರಿಯಲ್ಲ. ವಾದಿಯ ಹಿಸ್ಸೆಯ ಹಕ್ಕನ್ನು ದುರುದ್ದೇಶದಿಂದ ಲಪಟಾಯಿಸಬೇಕು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.